# ಸರಕಾರದಿಂದ ಬಟಾಟೆ ಕಾಪು ದಾಸ್ತಾನು

ಬಟಾಟೆ ರಾಬಿ ಬೆಳೆ ಈ ವರ್ಷ ಕಡಿಮೆಯಾಗುವ ನಿರೀಕ್ಷೆಯಿಂದ ಮುಂದಿನ ದಿನಗಳಲ್ಲಿ ಬಟಾಟೆ ದರ ಹೆಚ್ಚಳವಾಗುವ ಸಂಭವವಿರುವುದರಿಂದ ಕೇಂದ್ರ ಸರಕಾರ ಬಟಾಟೆ ಕಾಪು ದಾಸ್ತಾನು ಹೊಂದಲಿದೆಯೆಂದು ಪಾರ್ಲಿಮೆಂಟ್‌ಗೆ ತಿಳಿಸಲಾಗಿದೆಯೆನ್ನಲಾಗಿದೆ. ಬೆಲೆ ಸ್ಥಿರೀಕರಣ ನಿಧಿಯಿಂದ ಬಟಾಟೆ ಕಾಪು ದಾಸ್ತಾನು ಹೊಂದಲಾಗುವುದೆನ್ನಲಾಗಿದೆ. ನೀರುಳ್ಳಿ, ಬೇಳೆಕಾಳು ಕಾಪು ದಾಸ್ತಾನು ಹೊಂದಲೂ ಕೂಡ ಬೆಲೆ ಸ್ಥಿರೀಕರಣ ನಿಧಿಯನ್ನು ಉಪಯೋಗಿಸಲಾಗುತ್ತಿದೆ. ಬೆಲೆಯ ಹೆಚ್ಚಿನ ಏರಿಳಿತವನ್ನು ತಡೆಗಟ್ಟಿ ರೈತರಿಗೆ ಹಾಗೂ ಗ್ರಾಹಕರಿಗೆ ಉಪಯೋಗವಾಗುವಂತೆ ಕಾಪು ದಾಸ್ತಾನು ಹೊಂದಲು ರೂ.900 ಕೋಟಿ ಬೆಲೆ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸಲಾಗಿದೆ. 2015–16ನೇ ಸಾಲಿಗೆ ಬಟಾಟೆ ಕಾಪು ದಾಸ್ತಾನು ಹೊಂದಲು ಸರಕಾರ ಪರಿಗಣಿಸುತ್ತಿದೆಯೆಂದು ಆಹಾರ ಸಚಿವ ರಾಮ್‌ವಿಲಾಸ್ ಪಾಶ್ವಾನ್ ಅವರು ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದರೆನ್ನಲಾಗಿದೆ. 2014–15ರ ರಾಬಿ ಬೆಳೆಗೆ ಹೋಲಿಸಿದರೆ, ಬಟಾಟೆ 2015–16ರ ರಾಬಿ ಬೆಳೆ 11.3 ಶೇಕಡಾ ಇಳಿಕೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಇದರಿಂದ ಮುಂದಿನ ತಿಂಗಳುಗಳಲ್ಲಿ ಬಟಾಟೆ ದರ ಹೆಚ್ಚಳವಾಗುವ ಸಂಭವವಿದೆಯೆನ್ನಲಾಗಿದೆ. ಪ್ರತಿಕೂಲ ಹವಾಮಾನ ಹಾಗೂ ರೋಗ ಹಾವಳಿಯಿಂದ ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಲದಲ್ಲಿ ರಾಬಿ ಬಟಾಟೆ ಬೆಳೆ ಕಡಿಮೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಬಿಹಾರಗಳು ಪ್ರಮುಖ ಬಟಾಟೆ ಉತ್ಪಾದಿಸುವ ರಾಜ್ಯಗಳಾಗಿವೆ. 2014–15ರಲ್ಲಿ ಬಟಾಟೆ ಉತ್ಪಾದನೆ 48 ಲಕ್ಷ ಟನ್‌ಗಳಾಗಿತ್ತೆನ್ನಲಾಗಿದೆ.